**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ನಾಗೇಶ್ | **PW-08** |
| **ತಂದೆಯ ಹೆಸರು** | : | ಎಸ್ ಎನ್ ನಿಂಗಪ್ಪ | **CW-16** |
| **ವಯಸ್ಸು** | : | 52 ವರ್ಷ | |
| **ಉದ್ಯೋಗ** | : | ಟಿ.ವಿ ಶೋ ರೂಮ್, | |
| **ವಾಸಸ್ಥಳ** | : | ಮಾನಗಾರು, ಶೃಂಗೇರಿ. | |

**ದಿನಾಂಕಃ12-11-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿತರ ವಿರುದ್ಧ ಈ ಪ್ರಕರಣ ಏಕೆ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು).

**::ಪಾಟೀಸವಾಲು :: ಮಾನ್ಯ A P P ರವರಿಂದ ::**

1. ನಾನು ಶೃಂಗೇರಿ ಮಲ್ಲಿಕಾರ್ಜುನ ಬೀದಿಯಲ್ಲಿ ಸಿರಿ Electronics ಎಂಬ ಟಿ.ವಿ ಶೋ ರೂಮ್ ಇಟ್ಟುಕೊಂಡು ವ್ಯಾಪಾರವನ್ನು ಮಾಡಿಕೊಂಡಿರುತ್ತೇನೆ. ನಾನು 2017 ನೇ ಸಾಲಿನಲ್ಲಿ ಶೃಂಗೇರಿಯ ಭಕ್ತಂಪುರದ ಹತ್ತಿರ ಸ್ವಲ್ಪ ಜಮೀನನ್ನು ಲೇ ಔಟ್ ಮಾಡುವ ಉದ್ದೇಶದಿಂದ ಕ್ರಯಕ್ಕೆ ಕೊಂಡಿದ್ದು, ಪರಿಶೀಲಿಸಿದಾಗ ಜಾಗದಲ್ಲಿ ಬಂಡೆ ಕಂಡು ಬಂದಿದ್ದು, ಸದರಿ ಬಂಡೆಯನ್ನು ಒಡೆದುಕೊಂಡುವಂತೆ ನಾನು ಚಾಸಾ-15 ರವರಿಗೆ ತಿಳಿಸಿದ್ದು, ಅವರು ಈಗ ನಾನು ಆ ಕೆಲಸ ಮಾಡುತ್ತಿಲ್ಲ ಎಂದು ಹೇಳಿ ಬೇರೆ ಒಬ್ಬರನ್ನು ಕರೆಯಿಸಿ ನನಗೆ ಪರಿಚಯ ಮಾಡಿಸಿಕೊಟ್ಟಿದ್ದು, ಸದರಿ ಯವರು 4 ನೇ ಆರೋಪಿಯಾಗಿದ್ದು, ನಾನು 3 ನೇ ಆರೋಪಿಗೆ ಕೆಲಸವನ್ನು ವಹಿಸಿಕೊಟ್ಟಿದ್ದು, ನಂತರ ಆರೋಪಿತರ ವಿರುದ್ಧ ಈ ಪ್ರಕರಣ ದಾಖಲಾಗಿರುತ್ತದೆ ಎಂದು ತಿಳಿದು ಬಂದಿರುತ್ತದೆ ಎಂದು ಈಗ ನನಗೆ ಓದಿ ಹೇಳಿದಂತೆ ನಿಪಿ-19 ರಂತೆ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.